Date : 19-9-2015

# ಖಾದ್ಯತೈಲ ಆಮದು ಸುಂಕ ಶೇಕಡಾ 5% ಹೆಚ್ಚಳ

ಭಾರತದ ಕೇಂದ್ರ ಸರ್ಕಾರ ಖಾದ್ಯತೈಲಗಳ ಮೇಲಿನ ಆಮದು ಸುಂಕ ಶೇಕಡಾ 5 ಹೆಚ್ಚಳಗೊಳಿಸಿದೆ. ಕ್ರೂಡ್ ಖಾದ್ಯತೈಲಗಳ ಆಮದು ಸುಂಕವನ್ನು 7.5 ಶೇಕಡಾದಿಂದ 12 ಶೇಕಡಾಕ್ಕೆ ಮತ್ತು ರಿಫೈಂಡ್ ಖಾದ್ಯತೈಲಗಳ ಮೇಲೆ 15 ಶೇಕಡಾದಿಂದ 20 ಶೇಕಡಾ ಹೆಚ್ಚಳಗೊಳಿಸಿದೆ. ಭರಪೂರ ಆಮದನ್ನು ನಿಯಂತ್ರಣದಲ್ಲಿಡುವ ಸಲುವಾಗಿ ಸುಂಕ ಹೆಚ್ಚಳಗೊಳಿಸಲಾಗಿದೆಯೆನ್ನಲಾಗಿದೆ. ಆದರೆ ಜಾಗತಿಕ ಖಾದ್ಯತೈಲ ದರ ಕನಿಷ್ಠ ಮಟ್ಟದಲ್ಲಿರುವುದರಿಂದ ಮತ್ತು ಮಲೇಶ್ಯಾ ಮತ್ತು ಇಂಡೋನೇಶಿಯಾಗಳ ಖಾದ್ಯತೈಲ ದರ ಅತ್ಯಂತ ಕೆಳಮಟ್ಟದಲ್ಲಿರುವುದರಿಂದ ಈಗಿನ ಸುಂಕ ದರ ಹೆಚ್ಚಳ ಈ ದೇಶಗಳಿಂದಾಗುವ ಆಮದಿನ ಮೇಲೆ ಯಾವುದೇ ಪರಿಣಾಮ ಬೀರುವ ಸಂಭವವಿಲ್ಲ. ಆಮದು ಸುಂಕ ಕನಿಷ್ಠ ಶೇಕಡಾ 10ರಷ್ಟಾದರೂ ಹೆಚ್ಚಳಗೊಳಿಸಬೇಕಿತ್ತೆಂದು ವ್ಯಾಪಾರಿಗಳು ಮತ್ತು ಸಾಲ್ವೆಂಟ್ ಎಕ್ಸ್ಟ್ರ್ಯಾಕ್ಟರ್ಸ್ ಎಸೋಸಿಯೇಶನ್‌ನ ಅನಿಸಿಕೆಯಾಗಿದೆ. ವಿದೇಶಗಳಲ್ಲಿ ಕನಿಷ್ಠ ದರವಿರುವುದರಿಂದ ಖಾದ್ಯತೈಲ ಆಮದು ಗಣನೀಯ ಹೆಚ್ಚಳವಾಗುತ್ತಿದೆ ಮತ್ತು ಭಾರತ ಪ್ರಪಂಚದ ಅತೀ ದೊಡ್ಡ ಖಾದ್ಯತೈಲ ದೇಶವಾಗಿದ್ದು, ಆಮದು ಹೆಚ್ಚಳದಿಂದ ಸ್ಥಳೀಯ ರಿಫೈನರಿಗಳು ವ್ಯವಹರಿಸಲಾಗದೆ ರೈತರು ಸಂಕಷ್ಟಕ್ಕೊಳಗಾಗಿ ಖಾದ್ಯತೈಲ ಖರೀದದ ಬದಲು ಇತರ ಬೆಳೆಗಳನ್ನು ಬೆಳೆಯುತ್ತಿದ್ದಾರೆ

ಪ್ರತಿ ವರ್ಷ ಕನಿಷ್ಠ 1 ಮಿಲಿಯನ್ ಟನ್‌ಗಳಷ್ಟಾದರೂ ಖಾದ್ಯತೈಲ ದೇಶೀ ಬೇಡಿಕೆ ಹೆಚ್ಚಳವಾಗುತ್ತಿದ್ದು, ಒಟ್ಟು ಬಳಕೆ 19 ಮಿಲಿಯನ್ ಟನ್‌ಗಳಾಗಬಹುದಾಗಿದ್ದು, ಇದರಲ್ಲಿ 70 ಶೇಕಡಾ ಆಮದಿನ ಮೇಲೆ ಅವಲಂಬನೆಯಿದೆ. ದೇಶೀ ಆಮದು ಬಿಲ್ ಪೆಟ್ರೋಲಿಯಂ ಮತ್ತು ಚಿನ್ನದ ನಂತರದ ಗಿರಷ್ಠ ಮಟ್ಟದಲ್ಲಿದ್ದು 2014–15ರ ಆರ್ಥಿಕ ವರ್ಷದ ಖಾದ್ಯತೈಲ ಆಮದು ಬಿಲ್ 10 ಬಿಲಿಯನ್ ಡಾಲರ್‌ಗಳಾಗಬಹುದೆನ್ನಲಾಗಿದೆ.